

# RAMESHA.M

## GOVT HIGH SCHOOL G.K.HALLI

## CHANNAGIRI TQ

## DAVANAGERE DIST

**ವಿಶೇಷ ಸೂಚನೆ:** ಇದೊಂದು ಮಾದರಿ ಪ್ರಶ್ನೆ ಪತ್ರಿಕೆಯಾಗಿದೆ. ನಿಮ್ಮ ಶಾಲಾ ಹಂತದಲ್ಲಿ ಇದನ್ನು ಮಾದರಿಯಾಗಿಟ್ಟುಕೊಂಡು ಪ್ರಶ್ನೆ ಪತ್ರಿಕೆ ತಯಾರಿಸುವುದು.

ವಿಷಯ:- ಸಮಾಜ ವಿಜ್ಞಾನ | ಪ್ರಥಮ ಸೆಮಿಸ್ಟರ್ ಪರೀಕ್ಷೆ - **ಪ್ರಶ್ನೆ ಪತ್ರಿಕೆ** | ಅಂಕ:-40

ತರಗತಿ:- 8ನೇ ತರಗತಿ | ಸಮಯ:-90 ನಿ

**I. ಈ ಕೆಳಗಿನ ಬಹುಆಯ್ಕೆ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ: 2X1=2**

1.ಅಮೋರೈಟರ ಪ್ರಸಿದ್ಧ ದೊರೆ

ಎ) ನೆಬು ಕಡ್ನಿಜರ್ ಬಿ) ಜೂಲಿಯಸ್ ಸಿ) ಹಮ್ಮುರಬಿ ಡಿ) ಆಗಸ್ಟಸ್

2.ಸಮಾಜಶಾಸ್ತ್ರದ ಪಿತಾಮಹ

ಎ) ಆಗಸ್ಟ್ ಕಾಮ್ಟೆ ಬಿ) ಎಮಿಲಿ ಡರ್ಖಿಮ್ ಸಿ) ಮ್ಯಾಕ್ಸವೇಬರ್ ಡಿ) ಕಾರ್ಲ್ ಮಾರ್ಕ್ಸ್

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ: 2X1=2**

3.ಪ್ರಾಕ್ತನ ಆಧಾರವನ್ನು ಅರ್ಥೈಸಿ.

4.ರಾಜ್ಯಶಾಸ್ತ್ರದ ಒಂದು ವ್ಯಾಖ್ಯೆ ನೀಡಿ.

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: 4X2=8**

5.ಹವಾಂಗೋ ನದಿಯೂ "ಚೀನಾದ ದುಗುಡ" ಹೇಗೆ?

6.ರಾಜ್ಯಶಾಸ್ತ್ರ ಅಧ್ಯಯನದ ಯಾವುದಾದರೂ ಎರಡು ಪ್ರಯೋಜನಗಳನ್ನು ವಿವರಿಸಿ. **ಅಥವಾ**

ಪೌರತ್ವ ಪಡೆಯುವ ವಿಧಾನಗಳನ್ನು ತಿಳಿಸಿ.

7 .ಪೌರತ್ವವನ್ನು ಕಳೆದುಕೊಳ್ಳುವ ವಿಧಾನಗಳಾವುವು?

8 .ಮಾನವ ಸಮಾಜ ಜೀವಿ ಹೇಗೆ? **ಅಥವಾ**

ನಿಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಇರುವ ಸಾಂಸ್ಕೃತಿಕ ವೈವಿಧ್ಯತೆಗೆ ಉದಾಹರಣೆ ಕೊಡಿ.

**IV. ಈ ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿರಿ: 5X3=15**

9.ಇತಿಹಾಸ ರಚನೆಯಲ್ಲಿ ನಾಣ್ಯಗಳ ಪ್ರಾಮುಖ್ಯತೆಯನ್ನು ತಿಳಿಸಿ. **ಅಥವಾ**

ಭಾರತದ ಭೂ ಮೇಲ್ಮೈ ರಚನೆಯನ್ನು ಸ್ಥೂಲವಾಗಿ ತಿಳಿಸಿ.

10.ಮೊಹೆಂಜೋದಾರೊವಿನ ಈಜು ಸ್ನಾನ ಕೊಳದ ಬಗ್ಗೆ ಬರೆಯಿರಿ.

11.ಸ್ಥಾನಿಕ ವೇಳೆ ಮತ್ತು ಪ್ರಮಾಣವೇಳೆಗೂ ಇರುವ ವ್ಯತ್ಯಾಸಗಳನ್ನು ತಿಳಿಸಿ. **ಅಥವಾ**

ಭೂಮಿಯ ಅಂತರಾಳದ ಮೂರು ಪ್ರಮುಖ ಪದರುಗಳನ್ನು ವಿವರಿಸಿ.

12.ನಾವು ಅರ್ಥಶಾಸ್ತ್ರದ ಅಧ್ಯಯನವನ್ನು ಏಕೆ ಮಾಡಬೇಕು? **ಅಥವಾ**

ಆರ್ಥಿಕ ಚಟುವಟಿಕೆಗಳೆಂದರೇನು? ಅವುಗಳ ವರ್ಗಗಳಾವುವು?

13. ಚಿಲ್ಲರೆ ವ್ಯಾಪಾರಿಗಳು ಒದಗಿಸುವ ಸೇವೆಗಳಾವುವು? ಅಥವಾ

ಒಂದು ದೇಶಕ್ಕೆ ವಿದೇಶಿ ವ್ಯಾಪಾರದ ಅವಶ್ಯಕತೆಯನ್ನು ಕುರಿತು ವಿವರಿಸಿ.

**V. ಈ ಕೆಳಗಿನ ಪ್ರಶ್ನೆಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ: 2X4=8**

14. ವೇದಗಳ ನಾಲ್ಕು ಸ್ಕಂದಗಳನ್ನು ವಿವರಿಸಿ. **ಅಥವಾ**

ಮಹಾವೀರನ ಜೀವನ ಕುರಿತು ಬರೆಯಿರಿ.

15. ಶಿಥಿಲೀಕರಣ ಎಂದರೇನು? ಶಿಥಿಲೀಕರಣದ ಮೂರು ಮುಖ್ಯ ವಿಧಗಳನ್ನು ಹೆಸರಿಸಿ.

**VI. 16. ಭೂಗೋಳದ ಚಿತ್ರವನ್ನು ರಚಿಸಿ ಕೆಳಗಿನ ಪ್ರಮುಖ ರೇಖಾಂಶಗಳನ್ನು ಗುರುತಿಸಿ 1+4=5**

ಎ) 0 ಅಕ್ಷಾಂಶ ಸಮಭಾಜಕವೃತ್ತ ಬಿ)23½ ಕರ್ಕಾಟಕ ಸಂಕ್ರಾಂತಿವೃತ್ತ. ಸಿ) 90 ಉತ್ತರ ಅಕ್ಷಾಂಶ ಡಿ) 90 ದಕ್ಷಿಣ ಅಕ್ಷಾಂಶ

**ಸಂಕಲನಾತ್ಮಕ ಮೌಲ್ಯಮಾಪನ–1**

**ಪ್ರಥಮ ಸೆಮಿಸ್ಟರ್ ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ನೀಲನಕ್ಷೆ**

**ತರಗತಿ: 8ನೇ ತರಗತಿ** **ವಿಷಯ: ಸಮಾಜ ವಿಜ್ಞಾನ**

**ಪ್ರಶ್ನಾನುಸಾರ ಅಂಕ ಹಂಚಿಕೆ**

| | ಪ್ರಶ್ನೆಗಳು | ಪ್ರಶ್ನೆಗಳ ಸಂಖ್ಯೆ | ಅಂಕಗಳು |
|---|---|---|---|
| 01 | ಬಹುಆಯ್ಕೆ ಪ್ರಶ್ನೆಗಳು | 02 | 02 |
| 02 | ಒಂದು ಅಂಕ ಉತ್ತರದ ಪ್ರಶ್ನೆಗಳು | 02 | 02 |
| 03 | ಎರಡು ಅಂಕ ಉತ್ತರದ ಪ್ರಶ್ನೆಗಳು | 04 | 08 |
| 04 | ಮೂರು ಅಂಕ ಉತ್ತರದ ಪ್ರಶ್ನೆಗಳು | 05 | 15 |
| 05 | ನಾಲ್ಕು ಅಂಕ ಉತ್ತರದ ಪ್ರಶ್ನೆಗಳು | 02 | 08 |
| 06 | ನಕ್ಷೆ | 01 | 05 |
| | ಒಟ್ಟು | 16 | 40 |

**ವಿಷಯಾನುಸಾರ ಅಂಕ ಹಂಚಿಕೆ**

| | ಪ್ರಶ್ನೆಗಳ ಮಾದರಿಗಳು | ಬ.ಪ್ರ | 1.ಅಂ.ಪ್ರ | 2.ಅಂ.ಪ್ರ | 3.ಅಂ.ಪ್ರ | 4.ಅಂ.ಪ್ರ | ನಕ್ಷೆ | ಪ್ರಶ್ನೆಗಳು | ಅಂಕಗಳು |
|---|---|---|---|---|---|---|---|---|---|
| 01 | ಇತಿಹಾಸ | 01 | 01 | 01 | 02 | 01 | 00 | 06 | 14 |
| 02 | ರಾಜ್ಯಶಾಸ್ತ್ರ | 00 | 01 | 02 | 00 | 00 | 00 | 03 | 05 |
| 03 | ಸಮಾಜಶಾಸ್ತ್ರ | 01 | 00 | 01 | 00 | 00 | 00 | 02 | 03 |
| 04 | ಭೂಗೋಳಶಾಸ್ತ್ರ | 00 | 00 | 00 | 01 | 01 | 01 | 03 | 12 |
| 05 | ಅರ್ಥಶಾಸ್ತ್ರ | 00 | 00 | 00 | 01 | 00 | 00 | 01 | 03 |
| 06 | ವ್ಯವಹಾರ ಅಧ್ಯಯನ | 00 | 00 | 00 | 01 | 00 | 00 | 01 | 03 |
| | ಒಟ್ಟು | 02 | 02 | 04 | 05 | 02 | 01 | 16 | 40 |

# ಘಟಕವಾರು ಅಂಕ ಹಂಚಿಕೆ

| ಕ್ರ. ಸಂ | ಘಟಕಗಳು | ಜ್ಞಾನ | | | | | | ತಿಳುವಳಿಕೆ | | | | | | ಅನ್ವಯ | | | | | | ಕೌಶಲ್ಯ | | | | | ಒಟ್ಟು ಪ್ರಶ್ನೆ | ಒಟ್ಟು ಅಂಕ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ.ನಿ | 01 | 02 | 03 | 04 | 05 | ವ.ನಿ | 01 | 02 | 03 | 04 | 05 | ವ.ನಿ | 01 | 02 | 03 | 04 | 05 | 01 | 02 | 03 | 04 | 05 | | |
| 1 | ಆಧಾರಗಳು | | | | | | | | | | 1(3) | | | | 1(1) | | | | | | | | | | 01 | 01 |
| 2 | ಭರತವರ್ಷ | | | | | | | | | | 1(3) | | | | | | | | | | | | | | 01 | 03 |
| 3 | ಸಿಂಧೂ ಸರಸ್ವತಿ ನಾಗರಿಕತೆ | | | | | | | | | | 1(3) | | | | | | | | | | | | | | 01 | 03 |
| 4 | ಜಗತ್ತಿನ ಪ್ರಾಚೀನ ನಾಗರಿಕತೆಗಳು | 1(1) | | | | | | | | | | | | | | 1(2) | | | | | | | | | 02 | 03 |
| 5 | ಸನಾತನ ಧರ್ಮ | | | | | | | | | | 1(4) | | | | | | | | | | | | | | 01 | 04 |
| 6 | ಜೈನ ಮತ್ತು ಬೌದ್ಧ ಮತಗಳು | | | | | | | | | | 1(4) | | | | | | | | | | | | | | | |
| 7 | ರಾಜ್ಯಶಾಸ್ತ್ರದ ಅರ್ಥ ಮತ್ತು ಪ್ರಾಮುಖ್ಯ | | | | | | | | 1(1) | | | | | | | 1(2) | | | | | | | | | 01 | 01 |
| 8 | ಪೌರ ಮತ್ತು ಪೌರತ್ವ | | | 1(2) | | | | | | | | | | | | 1(2) | | | | | | | | | 02 | 04 |
| 9 | ಮಾನವ ಮತ್ತು ಸಮಾಜ | 1(1) | | | | | | | | 1(2) | | | | | | | | | | | | | | | 01 | 01 |
| 10 | ಮಾನವ ಮತ್ತು ಸಂಸ್ಕೃತಿ | | | | | | | | | 1(2) | | | | | | | | | | | | | | | 01 | 02 |
| 11 | ಭೂಮಿ–ನಮ್ಮ ಜೀವಂತ ಗ್ರಹ | | | | | | | | | | | | | | | | 1(3) | | | | | | | | 01 | 03 |
| 12 | ಶಿಲಾಗೋಳ | | | | | | | | | | | 1(4) | | | | | 1(3) | | | | | | | | 01 | 04 |
| 13 | ವಾಯುಗೋಳ | | | | | | | | | | | | | | | | | | | | | | | 5* | 01 | 05 |
| 14 | ಅರ್ಥಶಾಸ್ತ್ರದ ಅರ್ಥ ಮತ್ತು ಮಹತ್ವ | | | | | | | | | | 1(3) | | | | | | | | | | | | | | 01 | 03 |
| 15 | ವ್ಯವಹಾರದ ಅರ್ಥ ಮತ್ತು ಪ್ರಾಮುಖ್ಯ | | | | | | | | | | | | | | | | 1(3) | | | | | | | | 01 | 03 |
| | ಒಟ್ಟು | 3(04) | | | | | | 7(20) | | | | | | 5(11) | | | | | | 1(5) | | | | | 16 | 40 |


# ಮಾದರಿ ಉತ್ತರಗಳು

| | |
|---|---|
| 1) | ಸಿ) ಹಮ್ಮುರಬಿ |
| 2) | ಎ) ಆಗಸ್ಟ್ ಕಾಮ್ಟೆ |
| 3) | ಸಂಶೋಧನೆ ಮತ್ತು ಉತ್ಖನನಗಳಿಂದ ದೊರೆತಿರುವ ಶಾಸನಗಳು,ನಾಣ್ಯಗಳು,ಸ್ಮಾರಕಗಳು,ಮಡಿಕೆ ಕುಡಿಕೆಗಳು ಹಾಗೂ ಇನ್ನಿತರ ಪಳೆಯುಳಿಕೆಗಳನ್ನು ಪ್ರಾಕ್ತನ ಆಧಾರಗಳೆನ್ನುವರು. |
| 4) | ರಾಜ್ಯ, ಸರ್ಕಾರ ಮತ್ತು ಮಾನವನ ರಾಜಕೀಯ ಚಟುವಟಿಕೆಗಳನ್ನು ಕುರಿತು ಅಧ್ಯಯನ ಮಾಡುವ ವಿಷಯವೇ ರಾಜ್ಯಶಾಸ್ತ್ರ |
| 5) | • ನದಿಯೂ ಆಗಿಂದಾಗ್ಗೆ ತನ್ನ ಹಾದಿ ಬದಲಿಸಿ ಮನೆಗಳು ಮತ್ತು ಕೃಷಿಭೂಮಿ ನಾಶ ಮಾಡುತ್ತಿತ್ತು.<br>• ಕಾಲುವೆಗಳನ್ನು ನಿಷ್ಕ್ರಿಯಗೊಳಿಸುತ್ತಿತ್ತು.<br>• ಈ ಕಾರಣಕ್ಕಾಗಿ ಅಲ್ಲಿನ ಜನ ದುಃಖದ ಪ್ರತೀಕವೆನ್ನುತ್ತಾರೆ. |
| 6) | • ರಾಜ್ಯಶಾಸ್ತ್ರವು ರಾಜ್ಯದ ಸಂವಿಧಾನ ಮತ್ತು ಕಾನೂನುಗಳ ಬಗೆಗಿನ ಜ್ಞಾನವನ್ನು ಒದಗಿಸುತ್ತದೆ.<br>• ರಾಜ್ಯಶಾಸ್ತ್ರವು ಸರ್ಕಾರದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳು ಮತ್ತು ಅವುಗಳ ಕಾರ್ಯಗಳ ಬಗ್ಗೆ ತಿಳುವಳಿಕೆ ನೀಡುತ್ತದೆ.<br>ಅಥವಾ<br>1.ಜನನ ಸ್ಥಾನ 2.ದೇಶೀಕರಣ |
| 7) | 1.ಪರಿತ್ಯಾಗ 2.ಅಂತ್ಯಗೊಳ್ಳುವಿಕೆ 3.ಪದಚ್ಯುತಿ |
| 8) | • ಮಾನವ ಎಲ್ಲರೊಂದಿಗೆ ಬದುಕಲು ಪ್ರಯತ್ನಿಸುತ್ತಾನೆ.<br>• ನಮ್ಮೆಲ್ಲರ ಬೆಳವಣಿಗೆಗೆ ಸಮಾಜ ಅಗತ್ಯ<br>• ಮಾನವನ ಅಸ್ತಿತ್ವಕ್ಕೆ ಸಾಮಾಜಿಕ ಸಂಬಂಧಗಳು ಅಗತ್ಯ<br>• ಹೀಗಾಗಿ ಮಾನವ ಸಮಾಜ ಜೀವಿ<br>ಅಥವಾ<br>• ಜನರ ಭಾಷೆ<br>• ಉಡುಪು<br>• ಜೀವನ ವಿಧಾನ<br>• ಮಾತನಾಡುವ ಶೈಲಿ ಇತ್ಯಾದಿ |
| 9) | • ನಾಣ್ಯಗಳು ಆಕಾರದಲ್ಲಿ ಚಿಕ್ಕದಾಗಿದ್ದರೂ ಹಲವುಮಹತ್ವದ ಸಂಗತಿಗಳನ್ನು ಒಳಗೊಂಡಿರುತ್ತವೆ.<br>• ರಾಜನ ಅಧೀನದಲ್ಲಿರುವ ಪ್ರದೇಶದ ವ್ಯಾಪ್ತಿ<br>• ಆಡಳಿತ ಭಾಷೆ<br>• ರಾಜನ ಬಿರುದು ಮತ್ತು ಸಾಧನೆ<br>• ರಾಜನ ಮತ–ಧರ್ಮ<br>• ರಾಜ್ಯದ ಆರ್ಥಿಕ ಸ್ಥಿತಿ, ಅರಿಯುವಲ್ಲಿ ನಾಣ್ಯಗಳಪಾತ್ರ ಮಹತ್ವವಾದುದು.<br>ಅಥವಾ<br>• ಭಾರತದ ಭೂ ರಚನೆಯು ಉತ್ತರದ ಹಿಮಾಲಯದ ಪರ್ವತಶ್ರೇಣಿ ಸಮತಟ್ಟಾದ ಸಿಂಧೂ,ಗಂಗಾ ಬಯಲು<br>• ದಕ್ಷಿಣದ ದಖನ್ ಪ್ರಸ್ಥಭೂಮಿಯನ್ನು ಹಾಗೂ ಕರಾವಳಿ ತೀರ ಪ್ರದೇಶ<br>• ಉತ್ತರದ ಹಿಮಾಲಯ ಪರ್ವತ ಶ್ರೇಣಿಯು ಜಗತ್ತಿನಲ್ಲೇ ಅತ್ಯಂತ ಎತ್ತರವಾದ ಶಿಖರಗಳನ್ನು ಒಳಗೊಂಡಿದೆ. ಭಾರತದ ಸುರಕ್ಷತೆಯನ್ನು ಹಾಗೂ ಭದ್ರತೆಯನ್ನು ಇವು ಕಾಯ್ದಿರಿಸಲು ಸಹಾಯಕವಾಗಿವೆ.<br>• ಸಮತಟ್ಟಾದ ಸಿಂಧೂ ಗಂಗಾ ಬಯಲು ಸೀಮೆಗಳು ಅತ್ಯಂತ ಫಲವತ್ತಾದ ಪ್ರದೇಶಗಳು.ಪ್ರಾಚೀನ ನಾಗರಿಕತೆಗಳಾದ ಸಿಂಧೂ |

| | |
|---|---|
| | ಮತ್ತು ವೇದಕಾಲದ ನಾಗರಿಕತೆಗಳು ಇಲ್ಲಿಯೇ ಮೂಡಿಬಂದಿವೆ.<br>• ನರ್ಮದಾ ನದಿಯು ಭಾರತವನ್ನು ಎರಡು ಭಾಗಗಳನ್ನಾಗಿ ವಿಂಗಡಿಸಿದೆ-ಉತ್ತರದ ಎತ್ತರ ಪ್ರದೇಶ ಅಥವಾ ಮಾಳ್ವ ಪ್ರಸ್ಥಭೂಮಿ ಹಾಗೂ ದಖನ್ ಪ್ರಸ್ಥಭೂಮಿ.<br>• ಭಾರತ ಕರಾವಳಿಯು ಸುದೀರ್ಘವಾಗಿದ್ದು 6100ಕಿ.ಮೀ.ಗಳವರೆಗೆ ಹಬ್ಬಿಕೊಂಡಿದೆ. ಪೂರ್ವ ಕರಾವಳಿಯು ಕೋರಮಂಡಲದ ತೀರವೆಂದು ಕರೆಸಿಕೊಂಡಿದೆ. |
| 10) | • ಮೊಹೆಂಜೋದಾರೊವಿನಲ್ಲಿ ಒಂದು ಕೊಳವನ್ನು ಕಟ್ಟಲಾಗಿತ್ತು. ಇದನ್ನು ವಿದ್ವಾಂಸರು ಸ್ನಾನದ ಕೊಳವೆಂದಿದ್ದಾರೆ<br>• ಇದನ್ನು ಇಟ್ಟಿಗೆಗಳಿಂದ ಕಟ್ಟಿದ್ದಾರೆ.<br>• ಈ ಮೂಲಕ ಕೊಳದಿಂದ ನೀರಿನ ಸೋರಿಕೆ ಆಗದಂತೆ ನಿರ್ಮಿಸಿದ್ದಾರೆ<br>• ಇದರ ಎರಡು ಕಡೆಗಳಲ್ಲಿ ಇಳಿಯುವ ಮೆಟ್ಟಿಲುಗಳಿದ್ದು ಸುತ್ತಲು ಕೊಠಡಿಗಳಿವೆ.<br>• ಬಹುಶಃ ಇದರ ನೀರಿನಪೂರೈಕೆಯು ಬಾವಿಯಿಂದ ಆಗುತಿತ್ತು ಹಾಗೂ ಬಳಕೆಯ ನಂತರ ನೀರನ್ನು ಹೊರಗೆ ಬಿಡಲಾಗುತ್ತಿತ್ತು.<br>• ಪ್ರಾಯಶಃ ಈ ಕೊಳದಲ್ಲಿ ಬಹು ಮುಖ್ಯ ವ್ಯಕ್ತಿಗಳು ವಿಶೇಷವಾದ ಸಂದರ್ಭಗಳಲ್ಲಿ ಸ್ನಾನಮಾಡುತ್ತಿದ್ದಿರಬಹುದು |
| 11) | **ಸ್ಥಾನಿಕ ವೇಳೆ** : ಒಂದು ಸ್ಥಳದ ಸ್ಥಳದ ರೇಖಾಂಶ ಅಥವಾ ಸೂರ್ಯನ ಸ್ಥಾನಕ್ಕನುಸಾರವಾಗಿ ನಿರ್ಧರಿಸುವ ವೇಳೆಯನ್ನು 'ಸ್ಥಾನಿಕ ವೇಳೆ' ಎನ್ನುವರು. ಸ್ಥಾನಿಕ ವೇಳೆಯು ಆ ಸ್ಥಳದ ಸ್ಥಳೀಯ ರೇಖಾಂಶವನ್ನು ಅದರಲ್ಲೂ ಸ್ಥಳೀಯ ಮಧ್ಯಾಹ್ನದ ರೇಖೆಯನ್ನು ಆಧರಿಸಿರುತ್ತದೆ. ಆ ಸ್ಥಳದ ಮೇಲೆ ಸೂರ್ಯನ ಕಿರಣ ನೇರವಾಗಿ ಬೀಳುವುದರಿಂದ ಮಧ್ಯಾಹ್ನ 12 ಗಂಟೆಯಾಗಿರುತ್ತದೆ. ಆ ಮಧ್ಯಾಹ್ನರೇಖೆ ಹಾದುಹೋಗುವ ಎಲ್ಲಾ ಸ್ಥಳಗಳಲ್ಲೂ ಒಂದೇ ಸ್ಥಾನಿಕ ವೇಳೆಯಿರುತ್ತದೆ. ಪ್ರತಿ ರೇಖಾಂಶವೂ ತನ್ನದೇ ಆದ ಸ್ಥಾನಿಕ ವೇಳೆ ಹೊಂದಿದೆ.<br>**ಪ್ರಮಾಣ ವೇಳೆ** : ಸ್ಥಾನಿಕ ವೇಳೆಯು ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗುತ್ತದೆ. ಪ್ರತಿಯೊಂದು ಸ್ಥಳವೂ ತನ್ನದೇ ಸ್ಥಾನಿಕ ವೇಳೆಯನ್ನು ಅನುಸರಿಸುವುದರಿಂದ, ಸಾಕಷ್ಟು ಗೊಂದಲವುಂಟಾಗುತ್ತದೆ. ಗೊಂದಲವನ್ನು ನಿವಾರಿಸಲು ಹಲವು ದೇಶಗಳು ಇಡೀ ದೇಶದಲ್ಲಿ ಏಕರೂಪದ ವೇಳೆಯನ್ನು ಅನುಸರಿಸುತ್ತವೆ. ಇಂತಹ ಏಕರೂಪದ ವೇಳೆಯು ಆ ದೇಶದ ಮಧ್ಯದಲ್ಲಿ ಹಾದುಹೋಗುವ ರೇಖಾಂಶದ ವೇಳೆಯನ್ನಾಧರಿಸಿರುತ್ತದೆ ಅಥವಾ ಆ ರೇಖಾಂಶದ ಮೇಲಿರುವ ಪ್ರಮುಖ ನಗರದ ವೇಳೆಯಾಗಿರುತ್ತದೆ. ಈ ವೇಳೆಯನ್ನು ದೇಶದ ಎಲ್ಲಾ ಭಾಗಗಳಲ್ಲೂ ಅನುಸರಿಸುವುದರಿಂದ ಇದನ್ನು ಪ್ರಮಾಣಿತ ವೇಳೆ ಎಂದು ಕರೆಯುತ್ತಾರೆ.<br>ಅಥವಾ<br>• ಭೂಮಿಯ ಅಂತರಾಳವನ್ನು 3 ಪ್ರಮುಖ ಪದರುಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ-ಭೂಕವಚ, ಮ್ಯಾಂಟಲ್ ಮತ್ತು ಕೇಂದ್ರ ಗೋಳ<br>**ಭೂಕವಚ** : ಇದು ಭೂಮಿಯ ಅತ್ಯಂತ ಮೇಲ್ಭಾಗದ ಪದರವಾಗಿದೆ. ಇದು ಹೆಚ್ಚಾಗಿ ಸಿಲಿಕ, ಅಲ್ಯೂಮಿನಿಯಂ ಮತ್ತು ಮೆಗ್ನೀಷಿಯಂಗಳಿಂದ ಕೂಡಿದೆ. ಇದನ್ನು 'ಶಿಲಾಗೋಳ' ಎನ್ನುವರು. ಭೂ ಮೇಲ್ಭಾಗದಿಂದ ಇದು ಸುಮಾರು 60 ಕಿ.ಮೀ. ಆಳದವರೆಗೆ ವಿಸ್ತರಿಸಿದೆ.<br>**ಮ್ಯಾಂಟಲ್** : ಇದು ಭೂಮಿಯ ಅಂತರಾಳದ ಎರಡನೆಯ ಹಾಗೂ ಮಧ್ಯಭಾಗದ ಪದರು. ಮ್ಯಾಂಟಲ್ ವಲಯವು ಭೂ ಮೇಲ್ಮೈನಿಂದ ಸುಮಾರು 2900 ಕಿ.ಮಿ.ಗಳ ಆಳದವರೆಗೆ ವಿಸ್ತರಿಸಿದೆ.<br>**ಕೇಂದ್ರ ಗೋಳ**(ಭೂ ತಿರುಳು): ಇದು ಭೂಮಿಯ ಅತ್ಯಂತ ಒಳಭಾಗ. ಇದು ಭೂಮಿಯ ಮೇಲ್ಮೈನಿಂದ 6,371 ಕಿ.ಮೀ ಆಳದವರೆಗೆ ಇರುವುದು. |

| | |
|---|---|
| 12) | • ಅಪರಿಮಿತ ಬಯಕೆಗಳ ಸನ್ನಿವೇಶದಲ್ಲಿ ಸಂಪನ್ಮೂಲಗಳ ಕೊರತೆಯನ್ನು ಪರಿಗಣಿಸುವುದು<br>• ಸಂಪನ್ಮೂಲಗಳ ಉಪಯೋಗದಲ್ಲಿ ಆದ್ಯತೆ ನೀಡಿ ಅವುಗಳಲ್ಲಿ ಯಾವುದು ಅಧಿಕ ಮಹತ್ವವಾದುದು ಮತ್ತು ಯಾವುದು ಕಡಿಮೆ ಮಹತ್ವವಾದುದು ಎಂದು ಗುರುತಿಸುವುದು;<br>• ಸಂಪನ್ಮೂಲಗಳ ಉಪಯೋಗದಲ್ಲಿ ಮಿತವ್ಯಯ ಮಾಡುವುದು ಮತ್ತು ಸಂಪನ್ಮೂಲಗಳನ್ನು ಉಪಯೋಗಿಸಲು<br>• ಪ್ರತಿ ವ್ಯಕ್ತಿಯು ತನ್ನ ಕುಟುಂಬ ಮತ್ತು ರಾಷ್ಟ್ರದ ಏಳ್ಗೆಗಾಗಿ ಆರ್ಥಿಕ ಚಟುವಟಿಕೆಯಲ್ಲಿ ತೊಡಗುವುದು;<br>• ಸರ್ಕಾರದ ಆದಾಯಕ್ಕೆ ಕೊಡುಗೆಯನ್ನು ನೀಡುವುದು ಮತ್ತು ಅದಕ್ಕೆ ಅಭಿವೃದ್ಧಿಪರ ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಳ್ಳುವಲ್ಲಿ ಸಹಾಯ ಮಾಡುವುದು;<br>• ರಾಷ್ಟ್ರದಲ್ಲಿನ ಸಾಮಾಜಿಕ–ಆರ್ಥಿಕ ಸಮಸ್ಯೆಗಳಾದಂತಹ ಬಡತನ, ನಿರುದ್ಯೋಗ, ಹಣದುಬ್ಬರ, ಮುಂತಾದವುಗಳನ್ನು ತಿಳಿಯಲು ಮತ್ತು ಅವುಗಳಿಗೆ ಪರಿಹಾರವನ್ನು ಒದಗಿಸಲು ಪ್ರಯತ್ನಿಸಲು;<br>• ರಾಷ್ಟ್ರದ ನಿರೀಕ್ಷಿತ ಪ್ರಗತಿ ಮತ್ತು ಅಭಿವೃದ್ಧಿಗೆ ಉತ್ತಮ ನೀತಿಗಳನ್ನು ರೂಪಿಸಿ ಅವುಗಳನ್ನು ಅನುಷ್ಠಾನಗೊಳಿಸಲು ಉತ್ತಮ ಮಾರ್ಗಗಳನ್ನು ಸೂಚಿಸಲು.<br>ಅಥವಾ<br>• ಮಾನವನು ಹಣವನ್ನು ಹಾಗೂ ಸಂಪತ್ತನ್ನು ಗಳಿಸಲು ಆ ಮೂಲಕ ಬಯಕೆಗಳನ್ನು ತೃಪ್ತಿಪಡಿಸಿಕೊಳ್ಳುಲು ತೊಡುಗುವ ಚಟುವಟಿಗಳೇ ಆರ್ಥಿಕ ಚಟುವಟಿಕೆಗಳು<br>• ಆರ್ಥಿಕ ಚಟುವಟಿಕೆಗಳನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಲಾಗಿದೆ<br>• 1.ಉತ್ಪಾದಕ ಚಟುವಟಿಕೆಗಳು<br>• 2.ಅನುಭೋಗಿ ಚಟುವಟಿಕೆಗಳು<br>• 3.ವಿನಿಮಯ ಚಟುವಟಿಕೆಗಳು<br>• 4.ವಿತರಣೆ ಚಟುವಟಿಕೆಗಳು |
| 13) | • ಗ್ರಾಹಕರು ನೆಲೆಸಿರುವ ಕಡೆ ವ್ಯಾಪಾರ<br>• ಸಗಟು ವ್ಯಾಪಾರಿಗಳಿಂದ ವಸ್ತುಗಳ ತಂದು ಗ್ರಾಹಕರಿಗೆ ಮಾರಾಟ<br>• ವಸ್ತುಗಳ ವಿತರಣೆಯ ಕೊನೆಯ ಕೊಂಡಿ<br>• ವ್ಯಾಪಾರ ನಷ್ಟಗಳನ್ನು ಕೆಲವೊಮ್ಮೆ ತಾವೇ ಭರಿಸುತ್ತಾರೆ.<br>• ವಸ್ತುಗಳನ್ನು ಗ್ರಾಹಕರಿಗೆ ಅವರ ಇಷ್ಟದಂತೆ ಪ್ರಮಾಣಕ್ಕೆ ತಕ್ಕಂತೆ ವಿಂಗಡಿಸಿ ಕೊಡುತ್ತಾರೆ.<br>• ಹೊಸದಾಗಿ ಬಂದ ವಸ್ತುಗಳ ಬಗ್ಗೆ ಮಾಹಿತಿ<br>• ಪರ್ಯಾಯ ವಸ್ತುಗಳ ಬಗ್ಗೆ ತಿಳಿಸುತ್ತಾರೆ.<br>ಅಥವಾ<br>• ಪ್ರಪಂಚದ ಯಾವುದೇ ದೇಶ ಸಂಪನ್ಮೂಲ ಸ್ವಯಂಪೂರ್ಣತೆ ಹೊಂದಿಲ್ಲ.<br>• ಕೆಲವು ದೇಶಗಳಲ್ಲಿ ಸಂಪನ್ಮೂಲಗಳು ಹೇರಳವಾಗಿವೆ<br>• ಅಧಿಕ ಉತ್ಪಾದನೆ ಮಾಡಿದ ದೇಶಗಳು ಬೇರೆ ದೇಶಗಳಿಗೆ ರಫ್ತು ಮಾಡಲು<br>• ಸಂಪನ್ಮೂಲ ಕಡಿಮೆಯಿರುವ ದೇಶಗಳು ಆಮದು ಮಾಡಿಕೊಳ್ಳಲು<br>• ದೇಶಗಳ ಪರಸ್ಪರ ಸೌಹಾರ್ದಯುತ ಸಂಬಂಧ<br>• ದಿನೇ ದಿನೇ ಹೇಚ್ಚಾಗುತ್ತಿರುವ ಅವಶ್ಯಕತೆಗಳ ಹಿಡೇರಿಕೆಗಾಗಿ |

| | |
|---|---|
| 14) | • ವೇದಗಳನ್ನು ನಾಲ್ಕು ಸ್ಕಂದಗಳಾಗಿ ವಿಂಗಡಿಸಲಾಗಿದೆ.ಅವುಗಳೆಂದರೆ ಸಂಹಿತೆಗಳು,ಬ್ರಾಹ್ಮಣಗಳು,ಆರಣ್ಯಕಗಳು ಹಾಗೂ ಉಪನಿಷತ್ತುಗಳು<br>• ಸಂಹಿತೆ: ವಿವಿಧ ದೇವತೆಗಳ ಸ್ತೋತ್ರಗಳನ್ನು ಒಳಗೊಂಡಿದೆ<br>• ಬ್ರಾಹ್ಮಣ: ಯಜ್ಞ ಆಚರಣೆಯ ಕ್ರಮಗಳನ್ನು ತಿಳೀಸುವ ವೇದದ ಭಾಗ.<br>• ಆರಣ್ಯಕ: ಸ್ತೋತ್ರಗಳ ಮತ್ತು ಯಜ್ಞಗಳ ಅಂತರರ್ಥಗಳನ್ನು ವಿಶದಪಡಿಸುವ ಭಾಗ.<br>• ಉಪನಿಷತ್ತು: ತತ್ವಜ್ಞಾನದ ಮೂಲಕ ಪರಮಾತ್ಮನ ಸಾಕ್ಷಾತ್ಕಾರದ ವಿಧಾನಗಳನ್ನು ಚಿಂತನೆ ನಡೆಸುವ ಭಾಗ.<br>ಅಥವಾ<br>• ವರ್ಧಮಾನನು ಗಣರಾಜ್ಯಗಳಲ್ಲೊಂದಾದ ವೈಶಾಲಿಯ ಕುಂಡಲಗ್ರಾಮದಲ್ಲಿ ಜನಿಸಿದನು.<br>• ಇವನ ತಂದೆ ಸಿದ್ಧಾರ್ಥ, ಜ್ಞಾತ್ರಿಕ ಎಂಬ ಬುಡಕಟ್ಟಿನ ರಾಜ. ತಾಯಿ ತ್ರಿಶಲಾದೇವಿ, ಹೆಂಡತಿ ಪ್ರಬಲ ಗಣರಾಜ್ಯವಾಗಿದ್ದ ಲಿಚ್ಛವಿಗಳ ಯುವರಾಣಿ.<br>• ವರ್ಧಮಾನ ಮಹಾವೀರ ತನ್ನ 30ನೆಯ ವಯಸ್ಸಿನಲ್ಲಿ ಸತ್ಯಾನ್ವೇಷಣೆಯ ಹುಡುಕಾಟದಲ್ಲಿ ತೊಡಗಿದ ಈತ ಮನೆಯನ್ನು ತ್ಯಜಿಸಿದನು.<br>• ನಂತರ ಇವನು 12 ವರ್ಷಗಳ ಕಾಲ ಸತ್ಯದ ಹುಡುಕಾಟದಲ್ಲಿ ಅಲೆದಾಡಿದ, ತಪಸ್ಸು ಮಾಡಿದ. ಇವನು ಉಪವಾಸ ಮಾಡುವ ಮೂಲಕ ಸ್ವತಃ ತನ್ನ ದೇಹವನ್ನು ದಂಡಿಸಿಕೊಂಡನು.<br>• 42ನೆಯ ವಯಸ್ಸಿನಲ್ಲಿ ಕೈವಲ್ಯ ಜ್ಞಾನವನ್ನು ಪಡೆದನು. ಕೈವಲ್ಯ ಜ್ಞಾನವೆಂದರೆ ಜ್ಞಾನೋದಯವೆಂದರ್ಥ.<br>• ಇವನು ಇಂದ್ರಿಯಗಳನ್ನುನಿಗ್ರಹಿಸಿ ಸುಖ ಹಾಗೂ ಯಾತನೆಗಳ ಮೇಲೆ ನಿಯಂತ್ರಣವನ್ನು ಸಾಧಿಸಿಕೊಂಡ. ಈ ಸಾಧನೆಗಾಗಿ ಇವನು 'ಮಹಾವೀರ'ನೆಂದು ಕರೆಸಿಕೊಂಡು 'ಜಿನ'ನಾದನು.<br>• 'ಜಿನ'ನೆಂದರೆ ಎಲ್ಲವನ್ನು ನಿಗ್ರಹಿಸಿದವನು, ಜಯಿಸಿದವನು ಎಂದರ್ಥ. ಹೀಗಾಗಿಯೆ ಇವನ ಅನುಯಾಯಿಗಳನ್ನು ಜೈನರೆಂದು ಕರೆಯುತ್ತಾರೆ.<br>• ಮಹಾವೀರನು ತನ್ನ ಉಳಿದ 30 ವರ್ಷಗಳ ಬದುಕನ್ನು ಗಂಗಾನದಿಯ ಪ್ರದೇಶದ ಜನತೆಗೆ ತನ್ನ ತಿಳಿವನ್ನು ಬೋಧಿಸುತ್ತಾ ಕಳೆದನು.<br>• ಇವನು ತನ್ನ ಪಶ್ಚಿಮ ಭಾರತಕ್ಕೂ ಬೋಧಿಸುತ್ತಾ ಪ್ರಯಾಣಿಸಿದ. ಇವನು ತನ್ನ 72ನೆಯ ವಯಸ್ಸಿನಲ್ಲಿ ಬಿಹಾರದ ಪಾವಾಪುರಿ ಎಂಬಲ್ಲಿ ನಿರ್ವಾಣವನ್ನು ಹೊಂದಿದನು. |
| 15) | • ಶಿಲೆಗಳು ಒಡೆದು ಚೂರಾಗುವ ಮತ್ತು ಕ್ಷೀಣಿಸುವ ಸ್ವಾಭಾವಿಕ ಪ್ರಕ್ರಿಯೆಯೇ ಶಿಥಿಲೀಕರಣ.<br>**1. ಭೌತಿಕ ಶಿಥಿಲೀಕರಣ:** ಶಿಲೆಗಳು ಯಾವುದೇ ರಾಸಾಯನಿಕ ಬದಲಾವಣೆಯಾಗದೇ ಒಡೆದು ಚೂರಾಗುವ ಮತ್ತು ಕ್ಷೀಣಿಸುವ ಕ್ರಿಯೆಯನ್ನು ಭೌತಿಕ ಶಿಥಿಲೀಕರಣವೆನ್ನುವರು.<br>**2. ರಾಸಾಯನಿಕ ಶಿಥಿಲೀಕರಣ :** ಈ ವಿಧದ ಶಿಥಿಲೀಕರಣದಲ್ಲಿ ಮಳೆಯ ನೀರು ವಾಯುಮಂಡಲದ ಅನಿಲಗಳೊಡನೆ ವಿಲೀನಗೊಂಡು ಶಿಲೆಗಳನ್ನು ಶಿಥಿಲಗೊಳಿಸುವುದು. ಈ ಶಿಥಿಲೀಕರಣದ ಪ್ರಕ್ರಿಯೆಯಿಂದ ಶಿಲೆಗಳಲ್ಲಿರುವ ಖನಿಜಗಳ ಸಂಯೋಜನೆಯಲ್ಲಿ ಬದಲಾವಣೆಯಾಗುತ್ತವೆ.<br>**3. ಜೈವಿಕ ಶಿಥಿಲೀಕರಣ :** ಸಸ್ಯವರ್ಗ, ಪ್ರಾಣಿವರ್ಗ ಮತ್ತು ಮಾನವನಿಂದ ಶಿಲೆಗಳು ಒಡೆದು ಚೂರಾಗುವುದನ್ನು ಜೈವಿಕ ಶಿಥಿಲೀಕರಣ ಎನ್ನುವರು |

| | |
|---|---|
| **16**) |  |